ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಸೋಮವಾರ, ದಿನಾಂಕ : 07 ನೇ ಡಿಸೆಂಬರ್, 2020

ಕೊರೋನಾ 2ನೇ ಅಲೆಗೆ ಮುಂಜಾಗ್ರತೆ ವಹಿಸುವ ಬಗ್ಗೆ

ಶ್ರೀ ಎಸ್. ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ) –

13 (36) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಅಪ್ಪಳಿಸಲಿರುವ ಕೊರೋನಾ 2ನೇ ಅಲೆಗೆ ರಾಜ್ಯ ಸರ್ಕಾರ ಕೈಗೊಂಡ ಕಟ್ಟುನಿಟ್ಟಿನ ಕ್ರಮಗಳೇನು; (ವಿವರ ನೀಡುವುದು)

(ಆ) ಈಗಾಗಲೇ ದೇಶದ ವಿವಿಧ ಭಾಗಗಳಲ್ಲಿ ಕೊರೋನಾ 2ನೇ ಅಲೆಯು ಆರಂಭವಾಗಿದ್ದು, ರಾಜ್ಯದಲ್ಲಿಯೂ ಸಹ ಬೆಡ್, ವೆಂಟಿಲೇಟರ್ ಮತ್ತು ಸೂಕ್ತ ಸಮಯದಲ್ಲಿ ಆಂಬ್ಯುಲೆನ್ಸ್ ಸಂಪೂರ್ಣವಾಗಿ ವ್ಯವಸ್ಥೆ ಮಾಡಿಕೊಳ್ಳಲಾಗಿದೆಯೇ;

(ಇ) ಸರ್ಕಾರ ತುರ್ತು ಸಮಯದಲ್ಲಿ ಸಂಪರ್ಕಿಸಲು ಆಸ್ಪತ್ರೆಯ ದೂರವಾಣಿ ಸಂಖ್ಯೆಗಳನ್ನು ನೀಡಿದ್ದು, ಬಹುತೇಕ ದೂರವಾಣಿ ಸಂಖ್ಯೆಗಳು ದುರಸ್ಥಿಯಲ್ಲಿರುವುದು ಹಾಗೂ ಇನ್ನು ಕೆಲವು ಕರೆಗಳನ್ನು ಸ್ವೀಕರಿಸದೇ ಇರುವುದು ಸರ್ಕಾರದ ಗಮನದಲ್ಲಿದೆಯೇ; ಹಾಗಿದ್ದಲ್ಲಿ, ಕೊರೋನಾ 2ನೇ ಅಲೆಗೆ ಈ ರೀತಿ ಆಗದಂತೆ ಸರ್ಕಾರ ಕೈಗೊಂಡ ಮುನ್ನೆಚ್ಚರಿಕೆ ಕ್ರಮಗಳೇನು; ಆಸ್ಪತ್ರೆಗಳಿಗೆ ಸರ್ಕಾರದಿಂದ ಹೋದ ನಿರ್ದೇಶನಗಳೇನು? (ಪೂರ್ಣ ಮಾಹಿತಿ ನೀಡುವುದು)